ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ಹರಿಹರ
ಸಿಸಿ 27/2016

ಪಿ ಡಬ್ಲ್ಯೂ-24

ಸಾಕ್ಷಿಯ ಹೆಸರುಃ ಆಂಜಿನಿ ಸಿ ಡಬ್ಲ್ಯೂ-27

ತಂದೆಯ ಹೆಸರುಃ ಲಕ್ಷ್ಮಪ್ಪ

ವಯಸ್ಸುಃ 49

ಉದ್ಯೋಗಃ ವ್ಯವಸಾಯ

ವಾಸಸ್ಥಳಃ ಯಲವಟ್ಟಿ

ಸಾಕ್ಷಿಯನ್ನು ದಿನಾಂಕ ಃ 07.01.2020 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಸ ಸ ಅ ರವರಿಂದಃ

ಆರೋಪಿ ಪರಿಚಯ ಇರುತ್ತಾನೆ. 2010 ರಲ್ಲಿ ನಮ್ಮ ಜಮೀನಿನಲ್ಲಿ ಭತ್ತ ಬೆಳೆದಿದ್ದೆ. ಆರೋಪಿಗೆ ನಂದಿತಾವರೆ ಮಿಲ್ಲಗೆ ಭತ್ತ ತೆಗೆದುಕೊಂಡು ಹೋಗಿ ಭತ್ತ ಕೊಟ್ಟಿದ್ದೆ. ನಮ್ಮವು 127 ಚೀಲ ಭತ್ತ ಇದ್ದವು. ಕ್ವಿಂಟಲಗೆ 1100 ರೂ ಅಂತೆ ಮಾತನಾಡಿದ್ದೆವು. ನನಗೆ 1 ಲಕ್ಷ 3 ಸಾವಿರ ಚಿಲ್ಲರೆ ಕೊಡಬೇಕಾಗಿತ್ತು ಅದರಲ್ಲಿ 10,000 ರೂಗಳನ್ನು ಕೊಟ್ಟಿದ್ದ. ಉಳಿದ ಹಣವನ್ನು ಒಂದು ತಿಂಗಳು ಬಿಟ್ಟು ಕೊಡುತ್ತೇನೆ ಎಂದು ಹೇಳಿದ್ದ. ನಾನು ನಮ್ಮ ಭತ್ತವನ್ನು ಮಿಲ್ಲಗೆ ಹೋಗಿ ಇಳಿಸಿ ಬಂದಿರುತ್ತೇನೆ. ನಂತರ 15-20 ದಿನ ಆದ ನಂತರ ಆರೋಪಿ ಊರು ಬಿಟ್ಟು ಹೋಗಿರುತ್ತಾನೆ ಎಂದು ಗೊತ್ತಾಗಿರುತ್ತದೆ. ಆರೋಪಿ ನನಗೆ ಮೋಸ ಮಾಡಿ ಹೋಗಿರುತ್ತಾನೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾನೆ.

**ಪಾಟೀ ಸವಾಲುಃ ಆರೋಪಿ ಪರ** ವಕೀಲರಾದ ಶ್ರೀ ಆರ್.ಪಿ **ವಕೀಲರಿಂದಃ**

ನಾನು 9 ನೇ ತರಗತಿಯವರೆಗೆ ಓದಿರುತ್ತೇನೆ. ನಮಗೆ ಜಮೀನು ಇದ್ದ ಕುರಿತು ಪಹಣಿಯನ್ನು ತೋರಿಸಲು ಕೊಟ್ಟಿಲ್ಲ. ರೈಸ್ ಮಿಲ್ಲು ನಾಗೇಶ್ವರರಾವ್ ಇವರಿಗೆ ಸೇರಿದ್ದು ಎನ್ನುವುದು ನಿಜ. ನಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ನಾನು ಮತ್ತು ಜಿಗಳಿ ಗ್ರಾಮದ ಕೆ ವಿ ಚಂದ್ರಪ್ಪ ಮತ್ತು ನಮ್ಮ ಗ್ರಾಮದ ಬಿ.ಜಿ ವಾಗೇಶ , ಶರಣಪ್ಪ ತಂದೆ ಕರಿಬಸಪ್ಪ , ರಾಜಪ್ಪ ತಂದೆ ಬಸಪ್ಪ ಹಾಗೂ ಇತರರು ಸೇರಿ ಭತ್ತ ಮಾರಾಟ ಮಾಡಲು ಮಾತನಾಡಿದ್ದೆವು ಎಂದು ಪೋಲಿಸರಿಗೆ ಹೇಳಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ 5 ಎಂದು ಗುರುತಿಸಲಾಯಿತು. ಆರೋಪಿ ಊರು ಬಿಟ್ಟು ಹೋಗಿರುತ್ತಾನೆ ಎಂದು ಯಾರು ಹೇಳಿರುತ್ತಾರೆ ಅದರ ಬಗ್ಗೆ ಮಾಹಿತಿ

ಇದೆಯಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಆರೋಪಿ ನಂದಿತಾವರೆ ಗ್ರಾಮದಲ್ಲಿ ಇಂದಿಗೂ ವಾಸವಾಗಿದ್ದು ಅಲ್ಲಿ ಅವನ ಹೊಲ ಮನೆ ಮತ್ತು ಹೆಂಡತಿ ಮಕ್ಕಳು ಇರುತ್ತಾರೆ ಎನ್ನುವುದು ನಿಜ. ಭತ್ತದ ಹಣ ಆರೋಪಿ ನನಗೆ ಕೊಡಬೇಕು ಎಂದು ಸದರಿ ಹಣ ವಸೂಲಾತಿಗಾಗಿ ಸಿವಿಲ್ ಕೇಸನ್ನು ಸಲ್ಲಿಸಿಲ್ಲ. ಆರೋಪಿ ಭತ್ತ ಖರೀದಿ ಮಾಡಿರುವ ಕುರಿತು ಚೀಟಿಯನ್ನು ಕೊಟ್ಟಿರುತ್ತಾನೆ ಅದನ್ನು ಪೋಲಿಸರ ಮುಂದೆ ಹಾಜರು ಪಡಿಸಿರುತ್ತೇನೆ. ಆರೋಪಿಗೆ ನಾನು 127 ಚೀಲ ಭತ್ತ ಮಾರಾಟ ಮಾಡಿದ್ದು ಆರೋಪಿ ನನಗೆ ಇನ್ನೂ 93 ಸಾವಿರ ಚಿಲ್ಲರೆ ಹಣ ಕೊಡುವುದು ಬಾಕಿ ಇರುತ್ತದೆ ಎಂದು ಹೇಳಿರುವುದು ಸುಳ್ಳು ಇದ್ದ ಆರೋಪಿಗೆ ನಾನು ಯಾವುದೇ ಭತ್ತ ಮಾರಾಟ ಮಾಡಿಲ್ಲ ಅಂದರೆ ಸರಿಯಲ್ಲ. ಆರೋಪಿಯಿಂದ ನನಗೆ ಬರಬೇಕಾದಂತಹ ಹಣ ಯಾವುದೇ ಬಾಕಿ ಇಲ್ಲ ಅಂದರೆ ಸರಿಯಲ್ಲ. ಪಿರ್ಯಾದಿದಾರರ ಪರಿಚಯ ಇರುತ್ತದೆ. ಪೋಲಿಸರು ಮತ್ತು ಪಿರ್ಯಾದಿದಾರರ ಮಾತನ್ನು ಕೇಳಿ ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ರೀತಿಯ ಮೋಸ ಮಾಡದೇ ಇದ್ದರೂ ಸಹ ಮೋಸ ಮಾಡಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹರಿಹರ